

ಮೂಲ ಇಂಗ್ಲಿಷ್: ಓ. ಹೆನ್ರಿ
ಕನ್ನಡಕ್ಕೆ: ಭಾರತೀ ಕಾಸರಗೋಡು

ಊರ ಮಧ್ಯದ ಮುಖ್ಯರಸ್ತೆಯಲ್ಲಿ ಪ್ರಮುಖವಾದೊಂದು ಜಾಗದಲ್ಲಿ ಎದ್ದು ಕಾಣುವಂತೆ ನಿಂತಿದೆ 'ಬ್ಲೂ ಲೈಟ್' ಔಷಧಿ ಅಂಗಡಿ. ಅಸುಪಾಸಿನಲ್ಲೆಲ್ಲ ಬಲು ಪ್ರಸಿದ್ಧಿ ಕೂಡ ಪಡ ಕೊಂಡಿದೆ ಈ 'ಬ್ಲೂ ಲೈಟ್'! ಮದ್ದಿನಂಗಡಿ ಅಂದರೆ, ಹದಿನಾರಾಣೆಯಾಗಿಯೂ ಇದು ಮದ್ದಿನಂಗಡಿಯೇ! ಯಾಕೆಂದರೆ, ಪರಿಮಳ ದ್ರವ್ಯವನ್ನೋ ಅಥವಾ ತಂಪು ಪಾನೀಯವನ್ನೋ ಮಾರುವ ಸ್ಥಳ ಇದೆಂದು 'ಬ್ಲೂ ಲೈಟ್' ಎಂದೂ ಭಾವಿಸುವುದಿಲ್ಲ. ಹಾಗೆ ಯಾರಾದರೂ ಹೋಗಿ, ನೋವು ನಿವಾರಕ ಗುಳಿಗೆಗಳನ್ನು ಕೇಳಿದರೆ, ಮಿಠಾಯಿಯನ್ನಂತು ಅದು ಖಂಡಿತ ಕೊಡುವುದಿಲ್ಲ!

ಇನ್ನು ಔಷಧ ತಯಾರಿಕೆಯ ವಿಷಯದಲ್ಲಿ, ಆಧುನಿಕ ಪದ್ಧತಿಗಳನ್ನು ಈ ಅಂಗಡಿ ಎಂದೂ ಒಪ್ಪುವುದಿಲ್ಲ. ಯಾವುದಕ್ಕೂ ಯಂತ್ರಗಳನ್ನು ಅವಲಂಬಿಸುವುದಿಲ್ಲ. ಮದ್ದುಗಳನ್ನು ವಿಶಿಷ್ಟ ರೀತಿಯಲ್ಲಿ ನೆನೆಸಿಡುವುದು, ಬಗೆ ಬಗೆಯ ರಾಸಾಯನಿಕ ದ್ರಾವಣಗಳನ್ನು ತಯಾರಿಸುವುದು, ಮಾತ್ರೆಗಳನ್ನೆಲ್ಲ ಸಣ್ಣ ಸಣ್ಣ ಡಬ್ಬಿಗಳಲ್ಲಿ ಅಚ್ಚುಕಟ್ಟಾಗಿ ತುಂಬಿಸಿಡುವುದು— ಇವೆಲ್ಲವನ್ನೂ ಅಂಗಡಿಯ ಕೆಲಸಗಾರರೇ ಮುತುವರ್ಜಿಯಿಂದ ಮಾಡಿ ಮುಗಿಸಿ ಬಿಡುತ್ತಾರೆ.

ಕೆಲವಾರು ಬೀದಿಹೋಕ ಮಕ್ಕಳು ಆಗಿಂದಾಗ ದಾಂಧಲೆಯೆಬ್ಬಿಸುತ್ತ ಈ ಅಂಗಡಿಯ ಮುಂದೆ ಆಟವಾಡಿ ಕೊಳ್ಳುತ್ತಾರೆ. ತೊಟ್ಟಿರುವುದು ಚಿಂದಿ